# ಬಂದೇ ಬಿಡ್ತು ವೈಫೈ ವಿದ್ಯುತ್ತು!



ನಮಗೆಲ್ಲ ವೈಫೈ ಇಂಟರ್‌ನೆಟ್ ಬಳಸಿ ಗೊತ್ತಿದೆ. ವೈರ್‌ಲೆಸ್ ಚಾರ್ಜಿಂಗ್ ಬಗ್ಗೆಯೂ ತಿಳಿದಿದೆ. ಆದರೆ ವೈಫೈ ಎಲೆಕ್ಟ್ರಿಸಿಟಿ ಬಗ್ಗೆ ಮಾಹಿತಿ ಇದೆಯೆ?

■ ಗುರುರಾಜ್ ಎಸ್. ದಾವಣಗೆರೆ

ಗೋಡೆಯ ಸಾಕೆಟ್‌ಗೆ ಕೇಬಲ್ ಸಿಕ್ಕಿಸದೆ ನಿಮ್ಮ ಎಲೆಕ್ಟ್ರಿಕ್ ವಾಹನವನ್ನು ಚಾರ್ಜ್ ಮಾಡಬೇಕೆ? ಹಾಗಾದರೆ ನಿಮ್ಮ ವಾಹನವನ್ನು ನೆಲಕ್ಕೆ ಹಾಸಿರುವ ವಿಶಿಷ್ಟ ಚಾಪೆಯ ಮೇಲೆ ನಿಲ್ಲಿಸಿಬಿಡಿ. ಕೆಲವೇ ತಾಸುಗಳಲ್ಲಿ ನಿಮ್ಮ ವಾಹನದ ಬ್ಯಾಟರಿ ಚಾರ್ಜ್ ಆಗುತ್ತದೆ.

ಇಂಥದೊಂದು ವ್ಯವಸ್ಥೆ ಪ್ಯಾರಿಸ್ ನಗರದಲ್ಲಿ ಈ ವರ್ಷದ ಪ್ರಾರಂಭದಲ್ಲಿ ಚಾಲ್ತಿಗೆ ಬರಲಿದೆ. ನಿಮ್ಮ ಮನೆಯಂಗಳದಲ್ಲಿ ಈ ಚಾಪೆ ಇದ್ದರೆ ಸಾಕು. ಕೆಲಸ ಮುಗಿಸಿ ಆಫೀಸಿನಿಂದ ಬಂದು ಕಾರನ್ನು ಚಾಪೆಯ ಮೇಲೆ ಪಾರ್ಕ್ ಮಾಡುವುದಷ್ಟೇ ನಿಮ್ಮ ಕೆಲಸ. ಬೆಳಿಗ್ಗೆಯ ವೇಳೆಗೆ ವಾಹನದ ಬ್ಯಾಟರಿ ಸಂಪೂರ್ಣ ಚಾರ್ಜ್ ಆಗಿರುತ್ತದೆ. ಈ ಚಾಪೆಯನ್ನು ತಯಾರಿಸಿರುವ ಪೋರ್ಶೆ ಕಂಪನಿ, ತನ್ನ ಕಂಪನಿಯ ಸಯಾನಿ ಎಲೆಕ್ಟ್ರಿಕ್ ಕಾರುಗಳನ್ನು ಕೇಬಲ್ ಸಂಪರ್ಕ ಬಳಸದೆಯೇ ಚಾರ್ಜ್ ಮಾಡಲು ತಯಾರಿ ಮಾಡಿಕೊಳ್ಳುತ್ತಿದೆ. ಸ್ವೀಡನ್ನಿನ ಗೊಟೆನ್ ಬರ್ಗ್‌ನಲ್ಲಿಯೂ ಟ್ಯಾಕ್ಸಿಗಳನ್ನು ಚಾರ್ಜ್ ಮಾಡಲು ವೈರ್‌ಲೆಸ್ ತಂತ್ರಜ್ಞಾನ ಬಳಸುವ ಪ್ರಥಮ ಯೋಜನೆ ಚಾಲ್ತಿಯಲ್ಲಿದೆ. ಮುಂಬರುವ ದಿನಗಳಲ್ಲಿ ಕಂಪನಿಯು ಈ ವೈರ್‌ಲೆಸ್ ಚಾರ್ಜಿಂಗ್ ತಂತ್ರಜ್ಞಾನವನ್ನು ದೇಶಾದ್ಯಂತ ಬಳಸುವ ಇರಾದೆಯಲ್ಲಿದೆ.

ನಮಗೆಲ್ಲ ವೈಫೈ ಇಂಟರ್ನೆಟ್ ಬಳಕೆ ಮಾಡಿ ಗೊತ್ತಿದೆ. ಕಾರು, ಮನೆಗಳಲ್ಲಿ ಮೊಬೈಲ್ ಬ್ಯಾಟರಿ ಚಾರ್ಜ್ ಮಾಡಲು ವೈರ್‌ಲೆಸ್ ಚಾರ್ಜರ್‌ಗಳನ್ನು ಬಳಸುತ್ತೇವೆ. ಮೊಬೈಲು, ಲ್ಯಾಪ್‌ಟಾಪ್, ಟ್ಯಾಬ್ಲೆಟ್‌ಗಳಲ್ಲಿ ವೈರ್‌ಲೆಸ್ ಇಂಟರ್ನೆಟ್ ಬಳಸುವುದು ಈಗಾಗಲೇ ಕರಗತವಾಗಿದೆ. ಈಗ ವೈಫೈ ಇಂಟರ್ನೆಟ್‌ನಂತೆ 'ವೈಫೈ ಎಲೆಕ್ಟ್ರಿಸಿಟಿ' ಚಾಲ್ತಿಗೆ ಬರುತ್ತಿದೆ. ಥೇಟ್ ವೈಫೈ ಇಂಟರ್ನೆಟ್‌ನಂತೆ ಕೆಲಸ ಮಾಡುವ ಈ ವ್ಯವಸ್ಥೆಯಲ್ಲಿ ಯಾವುದೇ ಕೇಬಲ್‌ಗಳಿರುವುದಿಲ್ಲ. ಗೋಡೆಗೆ ಅಂಟಿಕೊಂಡಿರುವ ಸಾಕೆಟ್ ಬೇಕಾಗುವುದಿಲ್ಲ. ಉದ್ದುದ್ದ ತಂತಿಯ ಜಂಕ್ಷನ್ ಬಾಕ್ಸ್ ಬೇಕಿಲ್ಲ. ಆನ್–ಆಫ್ ಮಾಡುವ ಸ್ವಿಚ್‌ಗಳಿಗೂ ಜಾಗವಿರುವುದಿಲ್ಲ. ಆದರೂ ನಮ್ಮ ಕಾರು, ಬೈಕಿನ ಬ್ಯಾಟರಿಗಳನ್ನು ಸುಲಭವಾಗಿ ಚಾರ್ಜ್ ಮಾಡಬಹುದು.

## ಏನಿದು ವೈಫೈ ವಿದ್ಯುತ್?

'ವೈಫೈ ವಿದ್ಯುತ್' ಎಂದರೆ ದೂರದಲ್ಲಿರುವ ಒಂದು ಸಾಧನಕ್ಕೆ ವೈರ್‌ಲೆಸ್ ತಂತ್ರಜ್ಞಾನವನ್ನು ಬಳಸಿ ವಿದ್ಯುತ್ ಶಕ್ತಿಯನ್ನು ರವಾನಿಸುವುದು. ಯಾವುದೇ